ಕಾರ್ಖಾನೆಗೆ ಸುಮಾರು ರೂ. 3.95 ಕೋಟಿ ಸಾಲವನ್ನು ನೀಡಿದ್ದ ಮುಂಬೈ ಮೂಲದಇಂಡಿಯಾ ಫೈನಾನ್ಷಿಯರ್ಸ್ ಎಂಬ ಹಣಕಾಸು ಸಂಸ್ಥೆಯು ರಿಟ್ ಅರ್ಜಿ ಸಂಖ್ಯೆ: 1669:02ನ್ನು ದಾಖಲಿಸಿ ಜಿಲ್ಲಾಧಿಕಾರಿಗಳು ಹರಾಜು ಪ್ರಕ್ರಿಯೆಗೆ ತಡೆಯಾಜ್ಞೆ ತಂದರು ಸದರಿ ಪ್ರಕರಣದಲ್ಲಿ ಸಕ್ಕರೆ ನಿರ್ದೇಶಕರು ಪ್ರತಿವಾದಿಗಳನ್ನಾಗಿ ಮಾಡಿದಾಗ ಮಾನ್ಯ ಮುಂಬೈ ಉಚ್ಚ ನ್ಯಾಯಾಲಯವು ಮಧ್ಯಂತರ ಆದೇಶ ನೀಡಿರುತ್ತದೆ. ಅದರನ್ವಯ ಕಬ್ಬು ಬೆಳೆಗಾರರ ಬಾಕಿ ಸಂದಾಯವಾದ ನಂತರ, ನ್ಯಾಯಾಲಯಕ್ಕೆ ವರದಿ ಮಾಡಬೇಕು ಅಲ್ಲಿಯವರೆಗೆ ಕಾರ್ಖಾನೆಯ ಸ್ಥಿರ-ಚರಾಸ್ತಿಗಳ ಮುಟ್ಟುಗೋಲು ಮುಂದುವರಿಯುತ್ತದೆ. ಇದರಿಂದಾಗಿ ಕಾರ್ಖಾನೆಯ ಕಾರ್ಮಿಕರಿಗೆ ಸಂಬಳ ಬಾಕಿ ರೂ. 1.75 ಕೋಟಿ ವಸೂಲಿ ಮತ್ತು ಬಿಡುಗಡೆಗಾಗಿ ಕಾರ್ಮಿಕ ಆಯುಕ್ತರು ನೀಡಿದ ಭೂ ಕಂದಾಯರೂಪದ ಬಾಕಿ ವಸೂಲಿ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ.

ಮಾನ್ಯ ಮುಂಬೈ ಉಚ್ಚ ನ್ಯಾಯಾಲಯವು ನೀಡಿದ ಮಧ್ಯಂತರ ಆದೇಶದಂತೆ ಜಿಲ್ಲಾಧಿಕಾರಿಗಳು ಈ ಹಿಂದೆ ಜಪ್ತಿ ಮಾಡಿದ ಸಕ್ಕರೆ ದಾಸ್ತಾನನ್ನು ಮಾರಾಟ ಮಾಡಿ ಕಬ್ಬು ಬೆಳೆಗಾರರಿಗೆ ಬಾಕಿ ಇದ್ದ ರೂ. 12.18.05,546-00 ಪೈಕಿ ರೂ. 12,17,78,510 ಮೊತ್ತವನ್ನು ಶೇ 15ರ ಬಡ್ಡಿ ಸಹಿತ ಪಾವತಿಸಿದ್ದು, ಬ್ಯಾಂಕ್ ಖಾತೆ ವಿವರ ನೀಡದೇ ಇರುವ 4 ಮಂದಿ ರೈತರಿಗೆ ಸಂಬಂಧಿಸಿದ ರೂ. 77,036-00 ಮಾತ್ರ ಪಾವತಿಸಲು ಬಾಕಿ ಇರುತ್ತದೆ. ಮಾನ್ಯ ಮುಂಬೈ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ವಿಚಾರಣೆ ನಡೆದು ಪ್ರಕರಣವು 4 ವಾರಗಳ ಕಾಲಮುಂದೆ ಹೋಗಿರುತ್ತದೆ.

ಈ ಪರಿಸ್ಥಿತಿಯಲ್ಲಿ ಸದ್ಯಕ್ಕೆ ಕಾರ್ಖಾನೆಯು ಕಬ್ಬು ಸುರಿಸುವಿಕೆ ಪುನರಾರಂಭಿಸುವ ಸಾಧ್ಯತೆ ಕಂಡುಬರುತ್ತಿಲ್ಲ. ಇಲ್ಲಿ ರೈತರು ಬೆಳೆದ ಕಬ್ಬನ್ನು ಸುರಿಸುವುದಕ್ಕಾಗಿ ಸಮೀಪದ ಮೈಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಮತ್ತು ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಗಳಿಗೆ ತತ್ಕಾಲಿಕವಾಗಿ ಮರುಹಂಚಿಕೆ ಮಾಡಲಾಗಿದೆ.

ಇ. ಕಾರ್ಖಾನೆಯಿಂದ ಕಬ್ಬು ಬೆಳೆಗಾರರಿಗೆ ಬಾಕಿ ಇದ್ದ ರೂ. 12,18,05,546.00ರ ಪೈಕಿ ರೂ. 12,17,28,510.00 ಅನ್ನು ಪಾವತಿಸಿದ್ದು, ರೂ. 27,036.00ನ್ನು 4 ಮಂದಿ ರೈತರಿಗೆ ಪಾವತಿಸಲು ಬಾಕಿ ಇರುತ್ತದೆ. ಬಡ್ಡಿ ಬಾಬ್ತು ರೂ. 1,09,50,91 ಪಾವತಿಸಿದ್ದು, 4 ಮಂದಿ ಕಬ್ಬು ಬೆಳೆಗಾರರಿಗೆ ರೂ. 4,044,00 ಬಡ್ಡಿ ಪಾವತಿಸಲು ಬಾಕಿ ಇರುತ್ತದೆ.

ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ

1796(2256): ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) : ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರೇಷ್ಮೆ ಬೆಳೆಗಾರರಿಗೆ ಸರ್ಕಾರ ಕೊಡುತ್ತಿರುವ ಪ್ರೋತ್ಸಾಹ ಧನ ಈವರೆಗೆ ಎಷ್ಟು ಹಣ ರೈತರಿಗೆ ಪಾವತಿಯಾಗಿದೆ. ಬಾಕಿ ಹಣ ಎಷ್ಟು (ವಿವರ ನೀಡುವುದು)

ಆ. ಕೋಲಾರ, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಇಲಾಖೆವತಿಯಿಂದ ಹಾಗೂ ಕೇಂದ್ರ ರೇಷ್ಮೆ ಮಂಡಳಿಯಿಂದ ರೇಷ್ಮೆ ಬೆಳೆಗಾರರಿಗೆ ವಿಶೇಷ ಕಾರ್ಯಕ್ರಮವೇನಾದರೂ ಹಮ್ಮಿಕೊಳ್ಳಲಾಗಿದೆಯೇ ಇದ್ದರೆ ಈವರೆಗೆ ಅನುಷ್ಠಾನ ವರದಿ ನೀಡುವುದು.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಹಾಗೂ ಜವಳಿ ಸಚಿವರು)

ಅ. ರೇಷ್ಮೆ ಬೆಳೆಗಾರರಿಗೆ ದಿನಾಂಕ 16.9.2002 ರಿಂದ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ವಹಿವಾಟಾದ ಪ್ರತಿ ಕೆ.ಜಿ ಗೂಡಿಗೆ ರೂ. 10-00ರ ಪ್ರೋತ್ಸಾಹಧನ ನೀಡಲಾಗುತ್ತಿದೆ. ದಿನಾಂಕ 16.9.2002 ರಿಂದ 31.10.2002ರ ವರೆಗೆ ರೂ. 547.21 ಲಕ್ಷಗಳನ್ನು ಪಾವತಿ ಮಾಡಲಾಗಿದೆ. ಇನ್ನೂ ದಿನಾಂಕ 1.11.2002 ರಿಂದ 15.12.2002ರ ಅವಧಿಗೆ ಅಂದಾಜು ರೂ. 600-00 ಲಕ್ಷಗಳ ಬಾಕಿ ಇದೆ.

ಆ. ಕೋಲಾರ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಿಗೆ ಸೀಮಿತವಾದ ಕೇಂದ್ರ ರೇಷ್ಮೆ ಮಂಡಳಿಯ ಸಹಕಾರದ ಯಾವುದೇ ವಿಶೇಷ ಕಾರ್ಯಕ್ರಮ ಇರುವುದಿಲ್ಲ. ಆದರೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಅನ್ವಯವಾಗುವಂತೆ ಕೇಂದ್ರ ರೇಷ್ಮೆ ಮಂಡಳಿ ಸಹಯೋಗದೊಂದಿಗೆ ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2001-2002ನೇ ಸಾಲಿನಲ್ಲಿ ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮಗಳಡಿ ಮೇಲ್ಕಂಡ ಮೂರು ಜಿಲ್ಲೆಗಳಲ್ಲಿ ಸಾಧಿಸಿದ ಪ್ರಗತಿ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

2001-2002ನೇ ಸಾಲಿನಲ್ಲಿ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯೂ ಸಾಧಿಸಿರುವ ಪ್ರಗತಿಯ ವಿವರ

(ಆರ್ಥಿಕ ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಯ ಹೆಸರು	ಕೋಲಾರ ಜಿಲ್ಲೆ		ಮೈಸೂರು ಜಿಲ್ಲೆ		ಚಾಮರಾಜನಗರ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1.	ಹನಿ ನೀರಾವರಿ ಅಳವಡಿಕೆಗೆ ಸಹಾಯಧನ	218.66 (ಹೆಕ್ಟೇರ್)	65.93	17.00 (ಹೆಕ್ಟೇರ್)	5.14	18.54 (ಹೆಕ್ಟೇರ್)	5.45
2.	ಹೊಸ ಹಿಪ್ಪುನೇರಳೆ ಅಭಿವೃದ್ಧಿ ಸಹಾಯಧನ	3.75 (ಲಕ್ಷ ಸಸಿ)	0.75	2.25 (ಲಕ್ಷ ಸಸಿ)	0.45	2.3 (ಲಕ್ಷ ಸಸಿ)	0.47
3.	ಸುಧಾರಿತ ಮಿತವ್ಯಯ ಒಲೆ ನಿರ್ಮಾಣಕ್ಕೆ ಸಹಾಯಧನ	140 (ಒಲೆಗಳು)	2.24	-	-	-	-
4.	ರೇಷ್ಮೆ ಹುಳು ಮನೆಗೆ ಶೇ. 30ರ ಸಹಾಯಧನ	-	-	2 (ಮನೆಗಳು)	0.28	-	-
5.	ಮಲ್ಬಿ ಎಂಡ್ ಘಟಕ ಸ್ಥಾಪನೆಗೆ ಸಹಾಯಧನ	21 (ಘಟಕ)	39.10	-	-	-	-
6.	ದ್ವಿತಳಿ ರೇಷ್ಮೆಗೆ ಸಹಾಯಧನ	2(ಜನ)	1.20	-	-	-	-
7.	ನೇರನೇರವು ಯೋಜನೆಯಡಿ ರೇಷ್ಮೆ ಹುಳು ಸಾಕಾಣಿಕಾ ಮನೆಗೆ ಸಹಾಯ ಧನ	521 (ಮನೆಗಳು)	129.38	52 (ಮನೆಗಳು)	12.28	39 (ಮನೆಗಳು)	8.94
8.	ಗಣಮಟ್ಟದ ಸೋಂಕು ನಿವಾರಕಗಳ ಸರಬರಾಜಿಗೆ ರಿವಾಲ್ವಿಂಗ್ ಫಂಡ್	3 (ಸಂಸ್ಥೆ)	7.50	-	-	-	-
	ಒಟ್ಟು		246.10		18.15		14.86